ESTD : No. JRB/Cell.II/69/Regn-4876/77-78 ✆:080-26601442
Date : 09-12-1977

# ಬೆಂಗಳೂರು ನಗರ ಜಿಲ್ಲಾ ಸಹಕಾರ ಒಕ್ಕೂಟ ನಿಯಮಿತ

# THE BANGALORE CITY DIST. CO-OPERATIVE UNION LTD.,

' ಸಹಕಾರ ಭವನ ' ನಂ. 1/3, 3ನೇ ಮುಖ್ಯರಸ್ತೆ, ಚಾಮರಾಜಪೇಟೆ, ಬೆಂಗಳೂರು–560 018

E-mail: bcdcu1977@gmail.com

**ಹೆಚ್.ಟಿ. ನಾಗೇಶ್** ಅಧ್ಯಕ್ಷರು | **ಚಾಮರಾಜು ಕೆ.ಎಸ್.** ಉಪಾಧ್ಯಕ್ಷರು | **ವೆಂಕಟೇಶ್ ಎಂ.** ಖಜಾಂಚಿ

---

ಗೆ, ದಿನಾಂಕ:

ಸಂಪಾದಕರು,
ಸಹಕಾರ ವಾರಪತ್ರಿಕೆ,
ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ಬೆಂಗಳೂರು.

ಮಾನ್ಯರೇ,

ವಿಷಯ : ದಿನಾಂಕ:27.07.2024 ರಂದು ಏರ್ಪಡಿಸಿದ ರಾಜ್ಯ ಮಟ್ಟದ ಕಾರ್ಯಕ್ರಮದ ವರದಿಯನ್ನು ಪ್ರಕಟಿಸುವ ಬಗ್ಗೆ

****

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂದಿಸಿದಂತೆ ದಿನಾಂಕ: 27.07.2024 ರಂದು ಬೆಂಗಳೂರು ನಗರ ಜಿಲ್ಲೆಯಲ್ಲಿನ ಪತ್ತಿನ ಸಹಕಾರ ಸಂಘಗಳ ಮುಖ್ಯಕಾರ್ಯನಿರ್ವಹಣಾಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರಿಗೆ ಏರ್ಪಡಿಸಿದ್ದ ರಾಜ್ಯ ಮಟ್ಟದ ಕಾರ್ಯಕ್ರಮದ ಪೋಟೊ ಮತ್ತು ವರದಿಯನ್ನು ತಯಾರಿಸಿ ಈ ಪತ್ರದೊಂದಿಗೆ ಲಗತ್ತಿಸಿದ್ದು ಕಾರಣ ಸದರಿ ವರದಿಯನ್ನು ತಮ್ಮ ಸಹಕಾರ ವಾರಪತ್ರಿಕೆಯಲ್ಲಿ ಪ್ರಕಟಪಡಿಸಬೇಕೆಂದು ಈ ಮೂಲಕ ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

ವಂದನೆಗಳೊಂದಿಗೆ

ತಮ್ಮ ವಿಶ್ವಾಸಿ

ಸಹಿ/–
ಮುಖ್ಯಕಾರ್ಯನಿರ್ವಹಣಾಧಿಕಾರಿ

**ಪ್ರಕಟಣೆಗಾಗಿ**

ಬೆಂಗಳೂರು– ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ಹಾಗೂ ಬೆಂಗಳೂರು ನಗರ ಜಿಲ್ಲಾ ಸಹಕಾರ ಒಕ್ಕೂಟವು ಸಹಕಾರ ಶಿಕ್ಷಣ, ತರಬೇತಿ, ಪ್ರಚಾರದ ಮೂಲಕ ಸಹಕಾರ ಸಂಘಗಳನ್ನು ಬಲಬಡಿಸುತ್ತಿದೆ. ಇತ್ತಿಚ್ಚಿನ ಸಹಕಾರಿ ಕಾಯ್ದೆ ಕಾನೂನು ತಿದ್ದುಪಡಿ ವಿಷಯಗಳ ಕುರಿತು ಉಪನ್ಯಾಸ ನೀಡುವುದರಿಂದ ಎಲ್ಲಾ ರೀತಿಯಾ ಸಂಘಗಳು ಕಾನೂನಾತ್ಮಕವಾಗಿ ಕೆಲಸ ನಿರ್ವಹಿಸಲು ಹಾಗೂ ಸಿಬ್ಬಂದಿಗಳಿಗೆ ಹೊಸ ವಿಷಯಗಳನ್ನು ತರಬೇತಿ ನೀಡುವುದರಿಂದ ಅವರು ಸಂಘಗಳಲ್ಲಿ ದೈನಂದಿನ ಕೆಲಸ ಕಾರ್ಯಗಳನ್ನು ಉತ್ತಮವಾಗಿ ನಿರ್ವಹಿಸಲು ಸಹಾಯವಾಗುತ್ತದೆ ಎಂದು ಹಿರಿಯ ಸಹಕಾರಿಗಳು ಹಾಗೂ ಸಮಾಜ ಸೇವಕರು (ಸೊಸೈಟಿ) ಆದ ಶ್ರೀ ಮಂಜುನಾಥ್ ರವರು ಹೇಳಿದರು.

ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿಯಮಿತ ಬೆಂಗಳೂರು, ಬೆಂಗಳೂರು ನಗರ ಜಿಲ್ಲಾ ಸಹಕಾರ ಒಕ್ಕೂಟ ನಿಯಮಿತ, ಬೆಂಗಳೂರು ಹಾಗೂ ಬೆಂಗಳೂರು ನಗರ ಜಿಲ್ಲೆಯ ಪತ್ತಿನ ಸಹಕಾರ ಸಂಘಗಳ ಮುಖ್ಯಕಾರ್ಯನಿರ್ವಹಕರು ಮತ್ತು ಸಿಬ್ಬಂದಿಗಳಿಗೆ ಅನಿಸ್ ಸ್ಪೋರ್ಟ್ಸ್ ಆಕಾಡಮಿ ನಂ.42, 23ನೇ ಕ್ರಾಸ್ ಕೃಷ್ಣಯ್ಯ ಲೇಔಟ್, ಇಟ್ಟಮಡು, ಬನಶಂಕರಿ 3ನೇ ಹಂತ, ಬೆಂಗಳೂರು–560085 ದಿನಾಂಕ:27.07.2024 ರಂದು ಏರ್ಪಡಿಸಿದ್ದ ರಾಜ್ಯ ಮಟ್ಟದ ವಿಶೇಷ ತರಬೇತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಬೆಂಗಳೂರು ನಗರ ಜಿಲ್ಲಾ ಸಹಕಾರ ಒಕ್ಕೂಟದ ಅಧ್ಯಕ್ಷರಾದ ಶ್ರೀ ಹೆಚ್.ಟಿ. ನಾಗೇಶ್‌ರವರು ಮಾತನಾಡುತ್ತಾ, ಒಂದು ಸಂಘ ಉತ್ತಮವಾಗಿ ಮುನ್ನಡೆಯಬೇಕಾದರೆ ಮುಖ್ಯಕಾರ್ಯನಿರ್ವಾಹಕರು ಹಾಗೂ ಸಿಬ್ಬಂದಿಗಳು ಜವಾಬ್ದಾರಿಯುತವಾಗಿ ಕಾರ್ಯನಿರ್ವಹಿಸಬೇಕಾಗುತ್ತದೆ. ಸಹಕಾರ ವಲಯದ ಸಮಗ್ರ ಚಿತ್ರಣದ ಕುರಿತು ಸೂಕ್ತವಾಗಿ ಮಾಹಿತಿ ಪಡೆದು ಉತ್ತಮವಾಗಿ ಸಂಘಗಳನ್ನು ಬೆಳೆಸಿ ಹಾಗೆಯೇ ಒಕ್ಕೂಟದ ವತಿಯಿಂದ ನೀಡುವ ತರಬೇತಿಯ ಸದುಪಯೋಗವನ್ನು ಪಡೆದುಕೊಳ್ಳೀ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಮುಖ್ಯಅತಿಥಿಗಳಾಗಿ ಆಗಮಿಸಿದಂತಹ ಶ್ರೀ ಕೆ.ಎಸ್. ನವೀನ್ ಕೆ.ಸಿ.ಎಸ್ ವ್ಯವಸ್ಥಾಪಕ ನಿರ್ದೇಶಕರು ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ಬೆಂಗಳೂರು ಇವರು ಶಿಬಿರಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿ ಸಹಕಾರ ಮಹಾಮಂಡಳ ರಾಜ್ಯದ ಸಹಕಾರ ಚಳುವಳಿಯ ಆರೋಗ್ಯಕರ ಬೆಳವಣಿಗೆಗೆ ನಿರಂತರವಾಗಿ ಶ್ರಮಿಸುತ್ತಾ ಬಂದಿದ್ದು, ಇದೀಗ ಶತಮಾನವನ್ನು ಪೂರೈಸಿದೆ ವಲಯವಾರು ತರಬೇತಿಗಳನ್ನು ಹಮ್ಮಿಕೊಳ್ಳುವಾಗ ಮಹಾಮಂಡಳದ ತರಬೇತಿ ಕಾರ್ಯಕ್ರಮಗಳಿಗೆ ತಮ್ಮ ಸಲಹೆಗಳನ್ನು ತಿಳಿಸಿ ಜತೆಗೆ ಸಹಕಾರ ವಾರಪತ್ರಿಕೆಯ ಚಂದದಾರರಾಗುವ ಮೂಲಕ ರಾಷ್ಟ್ರದ ರಾಜ್ಯದ ಸಹಕಾರ ವಲಯದ ಮಾಹಿತಿಗಳನ್ನು ತಿಳಿದುಕೊಳ್ಳಲು ಸಲಹೆ ಮಾಡಿದರು.

ಕಾರ್ಯಕ್ರಮದಲ್ಲಿ ಒಕ್ಕೂಟದ ಉಪಾಧ್ಯಕ್ಷರಾದ ಶ್ರೀ ಕೆ.ಎಸ್. ಚಾಮರಾಜು, ಖಜಾಂಚಿರಾದ ಶ್ರೀ ಎಂ ವೆಂಕಟೇಶ್, ನಿರ್ದೇಶಕರುಗಳಾದ ಶ್ರೀ ವೈ ಶ್ರೀನಿವಾಸಗೌಡ, ಸಹಕಾರಿಗಳು ಹಾಗೂ ಸಮಾಜ ಸೇವಕರು, ಶ್ರೀ ಮಂಜುನಾಥ ಕರ್ನಾಟಕ ರಾಜ್ಯ ಸಹಕಾರ ಮಹಾಂಡಳದ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ನವೀನ್ ಕೆ.ಎಸ್. ರವರು ಉಪಸ್ಥಿತರಿದ್ದರು. ಶ್ರೀ ಗುರುಸ್ವಾಮಿ ಕೆ.ಸಿ.ಎಸ್ ವ್ಯವಸ್ಥಾಪಕ ನಿರ್ದೇಶಕರು ಕರ್ನಾಟಕ ರಾಜ್ಯ ಸಹಕಾರ ಗ್ರಾಹಕರ ಮಹಾಮಂಡಳ ನಿ., ಬೆಂಗಳೂರು, ಇವರು " ಪತ್ತಿನ ಸಹಕಾರ ಸಂಘಗಳಲ್ಲಿ ಸಾಲ ವಸೂಲಾತಿ ಹಾಗೂ ಕಾನೂನು ಕ್ರಮಗಳು ಋಣಾತ್ಮಕ ಸಾಲ " ವಿಷಯ ಕುರಿತು ಉಪನ್ಯಾಸ ನೀಡಿದರು. ನಂತರ ಶ್ರೀ ಸುಬ್ರಮಣ್ಯ ಕೆ. ರಾಜ್ಯ ತರಬೇತುದಾರರು ಹಾಗೂ ಸಂಸ್ಥಾಪಕರು, ಮೆಂಟರ್ ಆಫ್ ಗ್ರೇಸ್ ಆಕಾಡಮಿ, ಬೆಂಗಳೂರು ಇವರು " ಒತ್ತಡ ನಿರ್ವಹಣೆ ಮತ್ತು ಸಂವಹನ " ಕುರಿತು ಉಪನ್ಯಾಸ ನೀಡಿದರು. ನಂತರ ಶ್ರೀ ಅನಿಲ್ ಭಾರದ್ವಾಜ್ ಚಾರ್ಟಡ್ ಅಕೌಂಟೆಂಡ್ ಬೆಂಗಳೂರು, " ಸರಕು ಸೇವಾ ತೆರಿಗೆ (ಜಿ.ಎಸ್.ಟಿ) ಮತ್ತು ಆದಾಯ ತೆರಿಗೆ " ವಿಷಯ ಕುರಿತು ಉಪನ್ಯಾಸ ನೀಡಿದರು. ಕಾರ್ಯಕ್ರಮದ ಪ್ರಾರಂಭದಲ್ಲಿ ಶ್ರೀಮತಿ ಗಿರಿಜಾಕ್ಷಿ ರವರು ಪ್ರಾರ್ಥನೆ ಮಾಡಿದರು. ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಪ್ರಭಾರ ಸಹಕಾರ ಶಿಕ್ಷಣಾಧಿಕಾರಿಗಳಾದ ಶ್ರೀ ಶರಣಬಸಪ್ಪ ಕಾಟ್ರಳ್ಳಿ ರವರು ಎಲ್ಲರನ್ನು ಸ್ವಾಗತಿಸಿದರು. ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಸಹಕಾರ ವಾರಪತ್ರಿಕೆಯ ವರದಿಗಾರರಾದ ಶ್ರೀಮತಿ ದೀಪಾರವರು ನಿರೂಪಣೆ ಮಾಡಿದರು. ಕೊನೆಯಲ್ಲಿ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಸಾರ್ವಜನಿಕ ಸಂಪರ್ಕಧಿಕಾರಿ ಹಾಗೂ ಸಮನ್ವಯಾಧಿಕಾರಿ ಶ್ರೀ ಟಿ.ಎನ್. ಕೇಶವರವರು ವಂದನಾರ್ಪಣೆ ಮಾಡಿದರು.

ಸಹಿ/–
ಮುಖ್ಯಕಾರ್ಯನಿರ್ವಹಣಾಧಿಕಾರಿ(ಪ್ರ)


ಕರ್ನಾಟಕ ರಾಜ್ಯ
ಬೆಂಗಳೂರು ನಗರ